ಶ್ರೀ ಕೆ. ಲಕ್ಕಪ್ಪ.—ಕಾಫಿ ಜಮೀನು ಅವರ ಹೆಸರಿಗೆಂದು ಕನ್‌ಫರ್ಮ್ ಆಗುವುದಕ್ಕೆ ಮೊದಲು ರ್ಯಾಂಡ್ ಇಂಪ್ರೂವ್‌ಮೆಂಟ್ ಬ್ಯಾಂಕಿನಲ್ಲಿಯೋ ಅಥವಾ ಸಹಕಾರ ಸಂಘಗಳಲ್ಲಿಯೋ ಹಣವನ್ನು ಸಾಲವಾಗಿ ಕೊಟ್ಟಿರತಕ್ಕ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ಆ ರೀತಿ ಒಂದು ವೇಳೆ ಬಂದಿದ್ದರೆ ಆದರ ಮೇಲೆ ಏನು ಕ್ರಮವನ್ನು ತೆಗೆದುಕೊಂಡು ಅವರಿಗೆ ಕೊಟ್ಟ ಸಾಲವನ್ನು ವಸೂಲು ಮಾಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾಫಿ ಕಲ್ಟಿವೇಷನ್ ರೂಲ್ಸ್ ಪ್ರಕಾರ ಐದು ವರ್ಷಗಳವರೆಗೂ ಅವನ ಹೆಸರಿಗೆ ಆಗುವುದಿಲ್ಲ. ಆ ಐದು ವರ್ಷಗಳೊಳಗೆ ಅವನು ಕಾಫಿ ಸಾಗುವಳಿ ಮಾಡಿ ಅವನ ಹೆಸರನ್ನು ಕನ್‌ಫರ್ಮ್ ಮಾಡಿಸಿಕೊಳ್ಳಬೇಕು. ಒಂದು ವೇಳೆ ಅವನ ಹೆಸರು ಕನ್‌ಫರ್ಮ್ ಮಾಡುವುದರೊಳಗೆ ಯಾವುದಾದರೂ ಬ್ಯಾಂಕಿನವರು ಅವನಿಗೆ ಸಾಲದ ರೂಪವಾಗಿ ಹಣವನ್ನು ಕೊಟ್ಟಿದ್ದರೆ ಅದು ಅವರ ತಪ್ಪಾಗುತ್ತದೆ. ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

Bovi Colony in Byrasandra Village.

*Q.—248. Sri D. MUNICHINNAPPA (Bangalore South).—

Will the Government be pleased to state :—

(*a*) whether it is a fact that the previous Minister for Social Welfare had laid foundation-stone for the Bovi Colony in Byrasandra village, Jayanagar East, Bangalore South Taluk ;

(*b*) whether it is fact that a sum of Rs. 400 per house, had been sanctioned for construction of 40 houses in the above colony ;

(*c*) the amount of expenditure incurred on the Houses constructed there together with the expenditure incurred under each item for each house ?

A.—Sri S. NIJALINGAPPA (Chief Minister).—

(*a*) Yes.

(*b*) Yes.

(*c*) *Vide* Statement appended.

STATEMENT.

Showing the expenditure under each item for construction of Bovi colony buildings at Byrasandra village, Jayanagar East, Bangalore.

Sl. No.	Particulars of work	Cost in Rs.
1	2	3
1	Excavation in hard gravelly soil for foundations	205
2	Laying 1:6:12 cement concrete for foundations with 1½" jelly.	1,217
3	Size stone in clay for foundations in courses of 8" with bond stones.	4,570

(SRI S. NIJALINGAPPA)

1	2	3
4	Laying 1:6:12 cement concrete with baby jelly for basement.	546
5	Burnt bricks in clay for superstructure	7,729
6	Burnt bricks in C. M. 1:8 for superstructure	2,243
7	Supplying and fixing Honne wood doors with all iron fittings.	4,500
8	Supplying and fixing honne wood windows with iron bars and all iron fittings.	2,586
9	Supply and fixing B. S. slabs 4" thick in CM for lintels	483
10	Matthiwood brought and put up with wood oiling	1,975
11	Roofing with 1st class Mangalore tiles on jungle wood reapers	4,242
12	Supplying and fixing Mangalore ridge titles	419
13	Providing mortar bands with B.B. in LM and LM plastering	286
14	Plastering with 1 : 2 LM, ½" thick for walls	2,846
15	Flooring with lime concrete 3" thick	1,560
16	Supplying and fixing single vent out tiles in C.M.	150
17	1 : 3 C.M. pointing for stone masonry walls	121
18	White washing 2 coats	208
19	Earthwork filling to basement with an extra lead of 1 mile	179
20	Providing sanitary fittings with S.W. pipes and close, etc.	6,867
21	*Add* 20 per cent over the schedule rates	42,932 8,586
	Total outlay for 40 houses ...	51,518

Total outlay for each house=Rs. 1,288. Total cost of the work is Rs. 42,932 excluding 20 per cent. If 20 per cent is included the total cost would be Rs. 54,518 and cost of each house would be Rs. 1,288.

ಶ್ರೀ ಡಿ. ಮುನಿಚಿನ ಪ್ಪ.—ಸ್ವಾಮಿ, ಎರಡನೆಯ ಪ್ರಶ್ನೆಗೆ 40 ಮನೆಗಳನ್ನು ನಿರ್ಮಿಸುವುದಕ್ಕಾಗಿ ಮನೆಯೊಂದಕ್ಕೆ 400 ರೂಪಾಯಿಗಳನ್ನು ಮಂಜೂರುಮಾಡಿದ್ದು ನಿಜ ಎಂದು ಹೇಳಿದ್ದೀರಿ, ಹಾಗಾದರೆ ಸರ್ಕಾರದವರು 400 ರೂಪಾಯಿ ಗ್ರಾಂಟು ಕೊಟ್ಟು ಮನೆಯನ್ನು ಅರಾಟ್ ಮಾಡಿದ ಮೇಲೆ ಈಗ ಟ್ರಸ್ಟ್ ಬೋರ್ಡಿನವರು ಆ ಮನೆಗಳ ಮೇಲೆ 400 ರೂಪಾಯಿಗಳನ್ನು ಹಾಕಿದ್ದಾರೆ. ಇದು ಅನ್ಯಾಯವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ನ್ಯಾಯ. ಸರ್ಕಾರದವರು 400 ರೂಪಾಯಿ ಗ್ರಾಂಟ್ ಕೊಟ್ಟು ಮನೆ ಕಟ್ಟಿಕೊಳ್ಳಿ ಎಂದು ಸಹಾಯ ಮಾಡಿದ್ದಾರೆ. ಮತ್ತು ಸರ್ಕಾರದವರೇ ಕಾಲೋನಿ ಮಾಡಿ ಮನೆಗಳನ್ನು ಕಟ್ಟಿಕೊಡುತ್ತಿದ್ದಾರೆ. ಒಂದು ಕಂತಿಗೆ 12—15 ರೂಪಾಯಿಗಳಾಗುತ್ತದೆ. 20 ವರ್ಷಗಳ ಕಂತುಗಳಲ್ಲಿ ಅವರು ಆ ಮನೆಯ ಹಣವನ್ನು ತೀರಿಸುವುದಕ್ಕೆ ಅನುಕೂಲವಾಗುತ್ತದೆ. ಅದು ಬಹಳ ಒಳ್ಳೆಯ ಏರ್ಪಾಟೆಂದು ಕಾಣುತ್ತದೆ.

† ಶ್ರೀ ಡಿ. ಮುನಿಚಿನ್ನಪ್ಪ.—ಸರ್ಕಾರದವರು ಮೊದಲು ಮನೆಗಳನ್ನು ಕಟ್ಟುವುದಕ್ಕೋಸ್ಕರ 400 ರೂಪಾಯಿ ಗ್ರಾಂಟನ್ನು ಕೊಟ್ಟಿದ್ದರು. ಅಮೇಲೆ ಟ್ರಸ್ಟ್ ಬೋರ್ಡಿನವರು ಕಾಲನಿ ಮಾಡಿ ಮನೆಗಳನ್ನು ಕಟ್ಟಿಕೊಟ್ಟರು. ಹಿಂದೆ ಸರ್ಕಾರದವರು ಕಾಲೋನಿಯಲ್ಲಿ ಮನೆ ಕಟ್ಟುವುದ ಕ್ಕೋಸ್ಕರ ಕೊಟ್ಟಿದ್ದಂತಹ 400 ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಆದ್ದರಿಂದ ಈಗ ಆ 400 ರೂಪಾಯಿಗಳನ್ನು ಕೊಡಬೇಕೆಂದು ಟ್ರಸ್ಟ್ ಬೋರ್ಡಿನವರು ಮನೆಗಳ ಮೇಲೆ ಹಾಕಿದ್ದಾರೆ. ಆ ರೀತಿ 400 ರೂಪಾಯಿಗಳನ್ನು ಟ್ರಸ್ಟ್ ಬೋರ್ಡಿನವರು ಬಡವರ ಮೇಲೆ ಹಾಕಿರುವುದು ತಪ್ಪು ಅಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.— ಮಾನ್ಯ ಸದಸ್ಯರ ಅಭಿಪ್ರಾಯ ಹೀಗೆಂದು ಕಾಣುತ್ತದೆ. ಮೊದಲು ಸರ್ಕಾರದವರು ಮಂಜೂರು ಮಾಡಿದ್ದಂತಹ 400 ರೂಪಾಯಿಗಳನ್ನು ಕಳೆದುಕೊಂಡು ಆ ಮನೆಗಳಿಗೆ ದುಡ್ಡನ್ನು ಹಾಕಿ ಎಂದು. ಅದು ಯೋಚನೆ ಮಾಡುವ ಮಾತು.

ಶ್ರೀ ಡಿ. ಮುನಿಚಿನ್ನಪ್ಪ.—ಅಪ್ಪೆ, ತಾವು ಅಪ್ಪಣೆ ಕೊಟ್ಟರೆ ಆಗಬಹುದು. 400 ರೂಪಾಯಿ ಗಳನ್ನು ಕಳೆದುಕೊಂಡು ಮಿಕ್ಕ ಹಣವನ್ನು ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ.

ಶ್ರೀ ಎಸ್. ನಿಜಲಿಂಗಪ್ಪ.—ಯೋಚನೆ ಮಾಡೋಣ.

ಶ್ರೀ ಜೆ. ಶ್ರೀನಿವಾಸರೆಡ್ಡಿ.—ಆ ಮನೆಗಳನ್ನು ಕಟ್ಟಿ ಎರಡು ವರ್ಷ ಆದಮೇಲೆ ಅವುಗಳನ್ನು ಅಲಾಟ್ ಮಾಡಿದ್ದರಿಂದ, ಅವುಗಳನ್ನು ಅಲಾಟ್ ಮಾಡುವಾಗ ಆ ಮನೆಗಳಿಗೆ ಬಾಗಿಲು ಮತ್ತು ಹೆಂಚು ಯಾವುದೂ ಇರಲಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದ್ದರಿಂದ ಆ ಮನೆಗಳಿಗೆ ಕೊಡುವ ಹಣವನ್ನು ಕಡಿಮೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ವರ್ತಮಾನವನ್ನು ಕೊಡುತ್ತಿದ್ದೀರಿ, ಅದನ್ನು ಯೋಚನೆ ಮಾಡುತ್ತೇವೆ.

Rehabilitation of people comes under submersion Area of Hemavathi Project.

*Q.—274. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether the people belonging to submersion are of Hemavathi project have applied for lands for rehabilitation, in Dasanakennur Vijapur Bellame forests areas in Arkalgud taluk and in some other places in Hassan, Holenarasipur, Arsikere and Channarayapatna Taluks of Hassan District long back ;

(*b*) if so, the action they have taken to provide lands and rehabilitate them in time ?

A.—Sri M. V. KRISHNAPPA (Minister for Revenue).—

(*a*) Yes.

(*b*) Action is being taken by the Local Officers.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ, ಹಾಸನ, ಚನ್ನರಾಯಪಟ್ಟಣ ಅರಸೀಕೆರೆ ಮತ್ತು ಹೊಳೆನರಸೀಪುರ ತಾಲ್ಲೂಕುಗಳಲ್ಲಿ ಹೇಮಾವತಿ ಯೋಜನೆಯಿಂದ ಮುಳುಗಡೆ ಯಾಗತಕ್ಕ ಜನಗಳಿಗೆ ಜಮೀನನ್ನು ಒದಗಿಸಲು ಈಗ ಹಾಲಿ ಇರತಕ್ಕ ಜಮೀನನ್ನು ರಿಜರ್ವ್ ಮಾಡುತ್ತೀರಾ ?